ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-12

ಸಂಖ್ಯೆ: ಪಪೂಶಿಇ/ಶೈಶಾ-2/ಪ್ರ.ವಿ.ದಾ.ಬ/2021-22 ದಿನಾಂಕ:20.12.2021

# ಜ್ಞಾಪನ

ವಿಷಯ: 2021-22 ನೇ ಸಾಲಿಗೆ ಪ್ರಥಮ ಪಿಯುಸಿ ದಾಖಲಾತಿಗೆ ವಿಶೇಷ ಅನುಮತಿ ನೀಡುವ ಕುರಿತು.

ಉಲ್ಲೇಖ: 1. ಕಛೇರಿ ಸಮ ಸಂಖ್ಯೆ ಪತ್ರ ಸಂಖ್ಯೆ:ಪಪೂಶಿಇ/ಶೈ.ಶಾ/ಪ್ರ.ವಿ.ದಾ.ಬ/2021.22 ದಿನಾಂಕ: 09.12.2021.

2. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ರವರ ಪತ್ರ ಸಂಖ್ಯೆ:ಪಪೂಶಿ/ಆಶಾ/ಟಿಪ್ಪಣಿ/08/2021-22 ದಿನಾಂಕ:18-12-2021.

* * * * *

2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಗೆ ದಾಖಲಾಗಲು ಉಲ್ಲೇಖದಲ್ಲಿ ವಿವರಿಸಿದಂತೆ ತಕ್ಷಣವೇ ದಾಖಲಾಗಲು ತಿಳಿಸಲಾಗಿದ್ದು, ಆದಾಗ್ಯೂ ಹಲವಾರು ವಿದ್ಯಾರ್ಥಿಗಳು ಅನೇಕ ಕಾರಣಗಳಿಂದ ನಿಗದಿತ ದಿನಾಂಕದೊಳಗೆ ದಾಖಲಾತಿ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ಪೋಷಕರು ಹಾಗೂ ವಿದ್ಯಾರ್ಥಿಗಳು ಮನವಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳ ಮೇರೆಗೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2021-22ನೇ ಶೈಕ್ಷಣಿಕ ವರ್ಷಕ್ಕೆ ದಾಖಲಾತಿಗೆ ಉಲ್ಲೇಖ (2)ರನ್ವಯ ವಿಶೇಷ ಅನುಮತಿ ನೀಡಿ ಈ ಕೆಳಕಂಡಂತೆ ಆದೇಶಿಸಿದೆ.

2021-22ನೇ ಶೈಕ್ಷಣಿಕ ವರ್ಷಕ್ಕೆ ಅನುಬಂಧದಲ್ಲಿರುವ ವಿದ್ಯಾರ್ಥಿಗಳು ಕೋರಿರುವ ಪ್ರಥಮ ಪಿಯುಸಿಗೆ ದಾಖಲಾಗಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮತಿ ನೀಡಿದೆ. ಈ ಜ್ಞಾಪನ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ವಿದ್ಯಾರ್ಥಿಗಳು ತಕ್ಷಣವೇ ಸಂಬಂಧಿಸಿದ ಕಾಲೇಜಿನಲ್ಲಿ ದಾಖಲಾಗಲು ತಿಳಿಸಿದೆ. ಒಂದು ವೇಳೆ ದಾಖಲಾಗದೇ ಇದ್ದ ಪಕ್ಷದಲ್ಲಿ ವಿದ್ಯಾರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

ಸದರಿ ವಿದ್ಯಾರ್ಥಿಗಳಿಗೆ ದಾಖಲಾತಿ ಮಾರ್ಗಸೂಚಿ 2021-22ರ ಪ್ರಕಾರ ನಿಗಧಿತ ಶುಲ್ಕ ಹಾಗೂ ವಿಶೇಷ ದಂಡ ಶುಲ್ಕ ರೂ. 2890/-(ಎರಡು ಸಾವಿರದ ಎಂಟು ನೂರ ತೊಂಭತ್ತು) ರೂಗಳನ್ನು ಪಡೆದು ಆಯಾ ಕಾಲೇಜಿನ ಪ್ರಾಂಶುಪಾಲರು ದಾಖಲಾತಿ ಮಾಡಿಕೊಳ್ಳುವುದು. ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಇಲಾಖೆಗೆ ಸಲ್ಲಿಸಲು ಸೂಚಿಸಿದೆ. ಈ ರೀತಿ ಸಂಗ್ರಹಿಸಿದ ಶುಲ್ಕಗಳನ್ನು ಸರ್ಕಾರ/ಇಲಾಖೆಗೆ ದಾಖಲಾತಿ ದಿನಾಂಕ ಮುಗಿದ ಮಾರನೇ ಕಾರ್ಯನಿರತ ದಿನಾಂಕದಂದು (ವಿಶೇಷ ದಂಡ ಶುಲ್ಕ ದೊಂದಿಗೆ) ಖಜಾನೆಗೆ ಕಡ್ಡಾಯವಾಗಿ ಜಮೆ ಮಾಡುವುದು. ಈ ಸಂಬಂಧ ಆಗುಹೋಗುಗಳಿಗೆ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ಸೂಚಿಸಿದೆ.

**ಮುಂದುವರೆದು ದಾಖಲು ಮಾಡಿಕೊಳ್ಳುವ ಕಾಲೇಜಿನ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಎಸ್. ಎ. ಟಿ. ಎಸ್ ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ವಿವರವನ್ನು ನಮೂದಿಸಲು ಸೂಚಿಸಿದೆ.**

(ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ)

R Kusum
20/12/2021

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

...2

ಪ್ರತಿಗಳು:-

1. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ-ಅಗತ್ಯ ಕ್ರಮಕ್ಕಾಗಿ
2. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ-ಅಗತ್ಯ ಕ್ರಮಕ್ಕಾಗಿ
3. ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಮಾಹಿತಿಗಾಗಿ
4. ಸಹಾಯಕ ನಿರ್ದೇಶಕರು ಇ-ಆಡಳಿತ ಅಂತರಜಾಲದಲ್ಲಿ ಅಳವಡಿಸಲು
5. ಹೆಚ್ಚುವರಿ/ಕಛೇರಿ ಪ್ರತಿ.

ಪ್ರಥಮ ಪಿಯುಸಿ ವಿಳಂಬ ದಾಖಲಾತಿಗೆ ಅನುಮತಿ ನೀಡಿದ ವಿದ್ಯಾರ್ಥಿಗಳ ಪಟ್ಟಿ

ಅನುಬಂಧ

| Sl.No | STUDENT NAME | CLASS | COLLEGE NAME AND ADRESS |
|---|---|---|---|
| 1 | POORNIMA T.R | I PU | NEHARU VIDYA PU COLLEGE MAYASANDRA, TURUVEKERE TALUKU |
| 2 | FAMEEDA A. M | I PU | ANUGRAHA PU COLLEGE KUSHALANAGARA ( COLLEGE CODE-VV-0078) |
| 3 | TEJAS H.D | I PU | GOVT P U COLLEGE MALURU |
| 4 | PAVITHRA . I | I PU | S.V.R P U COLLEGE |
| 5 | SNEHA | I PU | AKKAMAHADEVI P U COLLEGE BALKI, BIDAR DIST, |

R Kusum

ಜಂಟಿ ನಿರ್ದೇಶಕರು(ಶೈಕ್ಷಣಿಕ)

ಪದವಿ ಪೂರ್ವ ಶಿಕ್ಷಣ ಇಲಾಖೆ